**ಸಮಗ್ರ ಕರಸಮಾಧಾನ ಯೋಜನೆ–2019 ರ ಅನುಕೂಲವನ್ನು ಪಡೆಯಲು ದಿನಾಂಕ: 31.07.2019 ರ ವರೆಗೆ ಸಮಯವನ್ನು ವಿಸ್ತರಿಸಿರುವ ಬಗ್ಗೆ ಪತ್ರಿಕಾ ಪ್ರಕಟಣೆ**

**"ಸಮಗ್ರ ಕರಸಮಾಧಾನ ಯೋಜನೆ–2019"** ನ್ನು ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 9 ಸಿಎಸ್‌ಎಲ್ 2019, ದಿನಾಂಕ: 21ನೇ ಫೆಬ್ರವರಿ 2019 ರಂತೆ ಜಾರಿಗೊಳಿಸಿರುತ್ತದೆ. ಕರನಿರ್ಧಾರಣೆ/ ಮರುಕರನಿರ್ಧಾರಣೆ / ತಿದ್ದುಪಡಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಯೋಜನೆಗೆ ಅರ್ಜಿ ಸಲ್ಲಿಸಿ, ದಂಡ ಹಾಗೂ ಬಡ್ಡಿಯ ಮನ್ನಾದ ಸೌಲಭ್ಯವನ್ನು ಪಡೆಯಲು ಒಂದು ತಿಂಗಳ ಸಮಯದ ವಿಸ್ತರಣೆಯನ್ನು ಮಾಡುವಂತೆ ವಾಣಿಜ್ಯೋದ್ಯಮಗಳು ಮನವಿಗಳನ್ನು ಸಲ್ಲಿಸಿದ್ದರಿಂದ, **ಸರ್ಕಾರವು ಈ ಮನವಿಗಳನ್ನು ಪರಿಗಣಿಸಿ ದಿನಾಂಕ: 28.06.2019 ರಂದು ಒಂದು ಆದೇಶವನ್ನು ಹೊರಡಿಸಿ ಯೋಜನೆಯ ಸಮಯವನ್ನು ಒಂದು ತಿಂಗಳು ವಿಸ್ತರಿಸಿರುತ್ತದೆ. ದಿನಾಂಕ: 21.02.2019 ರ ಆದೇಶದಲ್ಲಿ ನೀಡಲಾಗಿದ್ದ 30.6.2019 ರ ವರೆಗಿನ ಅವಧಿಯನ್ನು ಒಂದು ತಿಂಗಳು, ಅಂದರೆ ದಿನಾಂಕ: 31.7.2019 ರವರೆಗೆ ವಿಸ್ತರಿಸಲಾಗಿದೆ.**

ಆದುದರಿಂದ, ಕರ್ನಾಟಕ ರಾಜ್ಯದ ಎಲ್ಲಾ ವರ್ತಕರೂ ತಮ್ಮ ಕರನಿರ್ಧಾರಣೆ / ಮರುಕರನಿರ್ಧಾರಣೆ / ತಿದ್ದುಪಡಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು 31ನೇ ಜುಲೈ 2019 ರ ಒಳಗಾಗಿ ಪೂರ್ಣಗೊಳಿಸಿಕೊಂಡು, ಯೋಜನೆಗೆ ಅರ್ಜಿ ಸಲ್ಲಿಸಿ, ಬಾಕಿ ತೆರಿಗೆ ಮೊತ್ತವನ್ನು ಆನ್‌ಲೈನ್‌ನಲ್ಲಿ ಪಾವತಿಸಿ, ಬಡ್ಡಿ ಹಾಗೂ ದಂಡದ ಶೇಕಡ 100 ಮನ್ನಾ ಮಾಡಿಕೊಳ್ಳುವುದರೊಂದಿಗೆ **"ಸಮಗ್ರ ಕರಸಮಾಧಾನ ಯೋಜನೆ–2019"** ರ ಲಾಭವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ. ಈ ಯೋಜನೆಯ ಅನುಕೂಲಗಳನ್ನು ಪಡೆದುಕೊಳ್ಳಲು ನಿಗದಿಪಡಿಸಿದ್ದ 30ನೇ ಸೆಪ್ಟೆಂಬರ್ 2019 ನ ಕೊನೆಯ ದಿನಾಂಕವು ಮುಂದುವರೆದಿರುತ್ತದೆ.

1.7.2019

(ಎಂ.ಎಸ್. ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು

Scanned by CamScanner